

# ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ)

**ಮಂಗಳೂರು – ಕಾಸರಗೋಡು**

## ವಾರ್ಷಿಕ ವರದಿ 2023-24

ಆತ್ಮೀಯ ಬಂಧುಗಳೇ,

ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ) ಮಂಗಳೂರು–ಕಾಸರಗೋಡು ಇದರ ವಾರ್ಷಿಕ ಮಹಾಸಭೆಗೆ ಆಗಮಿಸಿದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ವಲಯ ಸಂಚಾಲಕರು, ಮಹಿಳಾ ಘಟಕದ ಸದಸ್ಯರು, ಯುವ ವೇದಿಕೆಯ ಸದಸ್ಯರು, ವಿಶೇಷ ಅಹ್ವಾನಿತರು, ಸದಸ್ಯರುಗಳು ಹಾಗೂ ಎಲ್ಲಾ ಸ್ವಜಾತಿ ಬಂಧುಗಳಿಗೆ ಗೌರವ ಪೂರ್ವಕ ಸ್ವಾಗತವನ್ನು ಕೋರುತ್ತಾ ಸಂಘದ 2023–2024 ನೇ ಸಾಲಿನ ವರದಿಯನ್ನು ತಮ್ಮ ಮುಂದೆ ಮಂಡಿಸಲು ಸಂತೋಷಪಡುತ್ತೇವೆ.

ದಿನಾಂಕ 18–06–2023ರ ಭಾನುವಾರದಂದು ಮಂಗಳೂರಿನ ಜಪ್ಪಿನಮೊಗರಿನಲ್ಲಿರುವ ನಮ್ಮ ಸಂಘದ ಸಮುದಾಯ ಭವನದಲ್ಲಿ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ ವಾಮನ ರಾವ್ ವಾಗ್ಮಾನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಪ್ರದೀಪ್‌ಚಂದ್ರ ಜಾಧವ್ ಸಭೆಗೆ ಮಂಡಿಸಿದ ಬಳಿಕ ವಿಚಾರ ವಿನಿಮಯ ನಡೆದು ವರದಿ ಮಹಾಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ಬಳಿಕ 2022–23ನೇ ಸಾಲಿನ ಪರಿಶೋಧಿತ (Audited) ಲೆಕ್ಕಪತ್ರವನ್ನು ಈ ಹಿಂದಿನ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದಂತೆ ಕೋಶಾಧಿಕಾರಿ ಶ್ರೀ ಮೋಹನ್ ರಾವ್ ಭೋಂಸ್ಲೆ ಸಭೆಯ ಮುಂದೆ ಮಂಡಿಸಿದರು. ಲೆಕ್ಕಪತ್ರದ ಬಗ್ಗೆ ವಿಚಾರ ವಿನಿಮಯ ನಡೆದು ಮಹಾಸಭೆಯಲ್ಲಿ ಅಂಗೀಕರಿಸಲಾಯಿತು.

ತದನಂತರ ಚುನಾವಣಾಧಿಕಾರಿಯಾದ ತ್ರಿವೇಣಿ ಯಶ್ವಂತ್ ಜಾಧವ್‌ರವರು 2023–24ನೇ ಸಾಲಿನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಆರಂಭಿಸಿದರು. ನಿರ್ದಿಷ್ಟ ಸಮಯದಲ್ಲಿ ಯಾವುದೇ ಹುದ್ದೆಗಳಿಗೆ ನಾಮಪತ್ರ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯವರು ಮಹಾಸಭೆಯ ಅನುಮತಿಯೊಂದಿಗೆ ಪ್ರಸ್ತುತ ಇರುವ ಪದಾಧಿಕಾರಿಗಳೇ ಮುಂದುವರಿಯುವುದಾಗಿ ಘೋಷಿಸಿದರು. ಕೆಲವು ಹುದ್ದೆಗಳ ಪದಾಧಿಕಾರಿಗಳು ಮುಂದುವರಿಯಲು ಆಸಕ್ತಿಯಿಲ್ಲದಿರುವ ವಿಚಾರವನ್ನು ತಿಳಿಸಿದಾಗ, ಚುನಾವಣಾಧಿಕಾರಿಗಳು ತನ್ನ ನಿರ್ಧಾರವನ್ನು ಪ್ರಕಟಿಸುತ್ತ ಹುದ್ದೆಯಲ್ಲಿ ಮುಂದುವರಿಯಲು ಆಸಕ್ತಿ ಇಲ್ಲದ ಪದಾಧಿಕಾರಿಗಳು ಕೂಡಲೇ ರಾಜಿನಾಮೆ ನೀಡಿ, ಮುಂದಿನ ಕಾರ್ಯಕಾರಿ ಸಮಿತಿ ಸಭೆಯವರೆಗೆ ರಾಜಿನಾಮೆ ಪತ್ರವನ್ನು ಹಿಂಪಡೆಯುವ ಅವಕಾಶವಿರುವ ಆದೇಶವನ್ನು ನೀಡಿದರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳ ಆಯ್ಕೆ ಅಧಿಕಾರವನ್ನು ಪದಾಧಿಕಾರಿಗಳಿಗೆ ನೀಡಿದರು.

ಅದರಂತೆ ಎಲ್ಲಾ ಪದಾಧಿಕಾರಿಗಳನ್ನು ಮನವೊಲಿಸಿ ಪ್ರಸ್ತುತ ಸಮಿತಿಯನ್ನು ಮುಂದುವರಿಸಲಾಯಿತು ಹಾಗೂ ಕಾರ್ಯಕಾರಿ ಸಮಿತಿಯಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಲಾಯಿತು. ಅದರಂತೆ 2023–24ನೇ ಸಾಲಿಗೆ ಈ ಕೆಳಗಿನ ಪೂರ್ಣ ಪ್ರಮಾಣದ ಸಮಿತಿಯನ್ನು ಆಯ್ಕೆ ಮಾಡಲಾಯಿತು.

### 2023–2024ನೇ ಸಾಲಿನ ಪದಾಧಿಕಾರಿಗಳು.

| | |
|---|---|
| **ಗೌರವಾಧ್ಯಕ್ಷರು** | : ಶ್ರೀಮತಿ ಪ್ರೇಮಲತಾ ವೈ ರಾವ್, ಕಾಸರಗೋಡು |
| **ಅಧ್ಯಕ್ಷರು** | : ಶ್ರೀ ವಾಮನ ರಾವ್ ವಾಗ್ಮಾನ್, ಮುಳ್ಳಂಗೋಡು |
| **ಉಪಾಧ್ಯಕ್ಷರು** | : ಶ್ರೀ ಪ್ರಮೋದ್ ರಾವ್ ಬಹುಮಾನ್, ಪಿಲಿಕುಂಜೆ |
| | ಶ್ರೀ ಧನಂಜಯ ರಾವ್ ಬಹುಮಾನ್, ಕರ್ಮಾರ್ |
| **ಕಾರ್ಯದರ್ಶಿ** | : ಶ್ರೀ ಪ್ರದೀಪ್‌ಚಂದ್ರ ಜಾಧವ್, ಮೆಟ್ಟಿಗೆಕಲ್ಲು |
| **ಕೋಶಾಧಿಕಾರಿ** | : ಶ್ರೀ ಮೋಹನ್ ರಾವ್ ಭೋಂಸ್ಲೆ, ಎಕ್ಕೂರು |
| **ಜೊತೆಕಾರ್ಯದರ್ಶಿ** | : ಶ್ರೀ ನಾರಾಯಣ ರಾವ್ ಲಾಡ್, ಕುಂಪಲ |
| | : ಶ್ರೀ ಶಿಶುಪಾಲ ರಾವ್ ಭೋಂಸ್ಲೆ, ಅಳಪೆ |
| **ಉಪ ಕೋಶಾಧಿಕಾರಿ** | : ಶ್ರೀ ಹರಿಶ್ಚಂದ್ರ ರಾವ್ ಜಾಧವ್, ಬಿಕರ್ನಕಟ್ಟೆ |

**ಕಾರ್ಯಕಾರಿ ಸಮಿತಿಯ ಸದಸ್ಯರು : ಶ್ರೀಯುತರುಗಳಾದ**

ಸಂಜೀವ ರಾವ್ ಸಿಂಧ್ಯಾ, ಬೋಳಾರ
ಶ್ರೀಧರ್ ರಾವ್ ಬಹುಮಾನ್, ಕುಂಪಲ
ಬಿ.ಜೆ. ಚಂದ್ರಶೇಖರ್ ಪಾಟೀಲ್, ಕುಂಪಲ
ಯತೀಂದ್ರ ಬಹುಮಾನ್
ನಾಗರಾಜ್ ರಾವ್ ಸಿಂಧ್ಯ, ಬಿಜೈ
ರಾಜೇಶ್ ರಾವ್ ಪಾಟೀಲ್, ಜಲ್ಲಿಗುಡ್ಡೆ
ಗಿರೀಶ್ ರಾವ್ ಭೋಂಸ್ಲೆ, ಬೋಳಾರ
ಶ್ರೀಮತಿ ಗಾಯತ್ರಿ ಸೂರ್ಯನಾರಾಯಣ್ ಚೌಹ್ಹಾಣ್, ಅಡೂರು
ಯತೀಶ್ ಕುಮಾರ್ ಪಾಟೀಲ್
ಸುರೇಂದ್ರ ರಾವ್ ಲಾಡ್
ಗಂಗಾಧರ ರಾವ್ ವಾಗ್ಮಾನ್, ಮಂಗಳೂರು
ಶ್ರೀಮತಿ ದಿವ್ಯಾ ಪವ್ಹಾರ್, ಪಾಂಡೇಶ್ವರ
ಸುರಕ್ಷಿತ್ ಪವಾರ್
ವಾಣಿ ಮೋರೆ
ಗುರುರಾಜ್ ಚಂದ್ರಮಾನ್, ಎಮ್ಮೆಕೆರೆ
ಪುರುಷೋತ್ತಮ್ ಬಹುಮಾನ್
ಶ್ರೀಮತಿ ಯಶ್ವತ ಧರೇಕರ್, ಎಕ್ಕೂರು
ಉದಯಶಂಕರ ಜಾಧವ್, ಮಂಕಿಸ್ಟ್ಯಾಂಡ್
ರಾಜೇಶ್ ಎಡನೀರು
ರೋಹಿತ್ ಬಿ.ಸಿ.ರೋಡ್

**ವಲಯ ಸಂಚಾಲಕರು : ಶ್ರೀಯುತರಾದ**

| | | |
|---|---|---|
| ಕುಸುಮಾಕರ ಚೌವ್ಹಾಣ್, ಕೊರಕೋಡು | – | ಕಾಸರಗೋಡು ವಲಯ |
| ಅಶ್ವಥ್ ಬಹುಮಾನ್ | – | ಕುಂಡಂಗೋಳಿ ವಲಯ |
| ನೂತನ ಪಾಟೀಲ್ | – | ಮಲ್ಲ ವಲಯ |
| ಪ್ರಶಾಂತ್ ಚಂದ್ರಮಾನ್, ಆದೂರು | – | ಆದೂರು ವಲಯ |
| ಉದಯ ಸಿಂಧ್ಯ, ಕುಂಟಾರು | – | ಕುಂಟಾರು ವಲಯ |
| ರಂಜಿತ್ ಲಾಡ್, ಅಡೂರು | – | ಅಡೂರು ವಲಯ |
| ಸವಿತಾ ವಿಶ್ವನಾಥ್ ಜಗತ್ತಾಪ್, ಪಡೀಲ್ | – | ಮಂಗಳೂರು ಉತ್ತರ ವಲಯ |
| ಗೋಪಾಲಕೃಷ್ಣ ಲಾಡ್ | – | ಮಂಗಳೂರು ದಕ್ಷಿಣ ವಲಯ |
| ಸಬಿತ ಭೋಂಸ್ಲೆ, ಬೋಳಾರ | – | ಮಂಗಳೂರು ಪಶ್ಚಿಮ ವಲಯ |
| ನಿಖಿಲ್ ಜಾಧವ್, ಜಲ್ಲಿಗುಡ್ಡೆ | – | ಮಂಗಳೂರು ಪೂರ್ವ ವಲಯ |

**ಮಹಿಳಾ ಘಟಕ:**

| | | |
|---|---|---|
| ಪ್ರಧಾನ ಸಂಚಾಲಕರು | : | ಶ್ರೀಮತಿ ಪೂರ್ಣಿಮ ಹರೀಶ್ ಚಂದ್ರಮಾನ್, ಜಲ್ಲಿಗುಡ್ಡೆ |
| (ದಕ್ಷಿಣ ಕನ್ನಡ) ಉಪ ಸಂಚಾಲಕರು | : | ಶ್ರೀಮತಿ ವಾಣಿ ಮೋರೆ, ಜೆಪ್ಪು |
| (ಕಾಸರಗೋಡು) ಉಪ ಸಂಚಾಲಕರು | : | ಶ್ರೀಮತಿ ಅನನ್ಯಾ ಪಾಟೀಲ್, ಪರಂಗೋಡು |

**ಯುವ ಘಟಕ :–**

| | | |
|---|---|---|
| ಪ್ರಧಾನ ಸಂಚಾಲಕರು | : | ಧರ್ಮರಾಜ್ ಜಾಧವ್, ಜಲ್ಲಿಗುಡ್ಡೆ |
| ಉಪ ಸಂಚಾಲಕರು | : | ದೀಪಕ್ ಚಂದ್ರಮಾನ್, ಅಂಬಿಕಾರೋಡ್ |
| | | ಸುನೀಲ್ ರಾವ್ ಜಾಧವ್, ತೊಕ್ಕೊಟ್ಟು |

**ವಿಶೇಷ ಆಹ್ವಾನಿತರು:–**

2023–2024ನೇ ಸಾಲಿನ ಯೋಜಿತ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಈ ಕೆಳಕಂಡ ಮಹನೀಯರುಗಳನ್ನು ವಿಶೇಷ ಅಹ್ವಾನಿತರಾಗಿ ಸಂಘದ ಪ್ರಥಮ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ನೀಲೋಜಿ ರಾವ್ ಭೋಂಸ್ಲೆ, ಬಿ.ಸಿ.ರೋಡ್
ನಾಗರಾಜ್ ಕೆ.ಎ. ಪುತ್ತೂರು
ಮೋಹಿನಿ ಜಯರಾಮ್, ಘೋರ್ಪಡೆ
ಉಮೇಶ್ ರಾವ್, ಬಜಗೋಳಿ
ಉಪೇಂದ್ರ ಕುದ್ರೋಳಿ
ಸುಧಾಕರ ರಾವ್ ಬಹುಮಾನ್, ಕಾರ್ಕಳ
ರಾಜಕುಮಾರ್ ಲಾಡ್
ಸುರೇಶ್ ರಾವ್ ಲಾಡ್, ಅಳಪೆ

| | |
|---|---|
| ಪುರುಷೋತ್ತಮ ರಾವ್ ಸಿಂಧ್ಯ | ಶ್ರೀಧರ್ ರಾವ್ ಪಾಟೀಲ್, ಬಾಯಿತೊಟ್ಟಿ |
| ಅನಂತ ಪದ್ಮರಾಜ್, ಸಿಂಧ್ಯ | ಪದ್ಮನಾಭ ರಾವ್ ಜಾಧವ್, ಪುತ್ತೂರು |
| ಹರೀಶ್ಚಂದ್ರ ಪವಾರ್ | ಕೀರ್ತನ್ ರಾವ್ ಲಾಡ್, ಕಾರ್ಕಳ |
| ದಿವಾಕರ್ ಜಾದವ್ | ಆಶಾಕಿರಣ್ ಸಪ್ಟೇಕರ್ |
| ಗೀತಾ ಅಶೋಕ್ ಭೋಂಸ್ಲೆ | ಲೋಕೇಶ್ ಬಹುಮಾನ್ ಕರ್ಮಾರ್ |
| ವಿವೇಕ್ ಅಡೂರು | ಅಶೋಕ್ ಜಾಧವ್, ಕದ್ರಿ |
| ತ್ರಿವೇಣಿ ಜಾಧವ್ | ಹರಿಕೇಶವ್‌ಜಿ ಜಾಧವ್, ಜಲ್ಲಿಗುಡೆ |
| ಗಿರಿಧರ್ ರಾವ್, ಚೊಟ್ಟೆ | ಧನುಷ್ ವಾಗ್ಮಾನ್, ತುಂಬಡ್ಕ |
| ರಾಜೇಶ್ವರ ಧರೆಕ್ಕರ್ | ಅನಿಲ್ ಜಗತ್ತಾಪ್, ಉಡುಪಿ |
| ರಾಮೋಜಿ ವಾಗ್ಮಾನ್ | ಧ್ರುವೇಶ್ ಚಂದ್ರಮಾನ್, ಎಕ್ಕೂರು |
| ಜಯಂತ ಕಡೆಂಗೋಡು | ವಿಶ್ವನಾಥ್ ರಾವ್ ಜಾಧವ್, ಕುಂಪಲ |
| ವಾಸು ಮಾಡೆಡ್ಕ | ಶೈಲೇಶ್ ಬಹುಮಾನ್, ಕರ್ಮಾರ್ |
| ರಾಧಕೃಷ್ಣ ಪಡ್ರೆ | ಸಾರಿಕಾಶ್ರೀ ಭೋಂಸ್ಲೆ |
| ವಿಶ್ವನಾಥ ಜಗತಾಪ್ | ಹರೀಶ್ ರಾವ್ ಚಂದ್ರಮಾನ್ |
| ಮಹದೇವ ಪಾಟೀಲ್ | ಹರೀಶ್ ರಾವ್ ಜಾಧವ್, ಮಡ್ಯಾರ್ |
| ಸುಂದರ್ ರಾವ್ ಲಾಡ್ | ಸುಧಾಕರ್ ರಾವ್ ಪಾಟೀಲ್, ಜಲ್ಲಿಗುಡ್ಡೆ |
| ಸದಾನಂದ ಕಟ್ವಾಟ್ | ಸುಧಾಕರ್ ರಾವ್ ವಾಗ್ಮಾನ್, ತಲಪಾಡಿ |
| ಜನ್ನೋಜಿ ರಾವ್, ಮುಂಡ್ಕೂರು | ಗಿರಿರಾಜ್, ಧರೇಕ್ಕರ್ |
| ಲೋಕೇಶ್ ಪವಾರ್, ಮುಲ್ಕಿ | ರಾಕೇಶ್ ವಾಗ್ಮಾನ್, ಕುಂಪಲ |
| ನಾಗೇಶ್ವರ್ ರಾವ್ ಪವಾರ್, ಕಾಸರಗೋಡು | |

**ಜವಾಬ್ದಾರಿ ಹಂಚಿಕೆ :–**

2023–2024ನೇ ಸಾಲಿನ ಯೋಜಿತ ಕಾರ್ಯಕ್ರಮದ ಅನುಷ್ಠಾನಕ್ಕೆ ಜವಾಬ್ದಾರಿಯನ್ನು ಈ ಕೆಳಕಂಡ ಮಹನೀಯರುಗಳಿಗೆ ಹಂಚಿಕೆ ಮಾಡಲಾಯಿತು.

| | | |
|---|---|---|
| **ಸಮನ್ವಯ** | : ದಕ್ಷಿಣ ಕನ್ನಡ | : ಶ್ರೀ ಧನಂಜಯ ಬಹುಮಾನ್ |
| | ಕಾಸರಗೋಡು | ಶ್ರೀ ಪ್ರಮೋದ್ ಕುಮಾರ್ ಬಹುಮಾನ್ |
| **ಸದಸ್ಯತ್ವ ನೋಂದಣಿ** | | |
| **ಸದಸ್ಯತ್ವ ಅಭಿಯಾನ** | : ದಕ್ಷಿಣ ಕನ್ನಡ | : ಮಹಿಳಾ ಘಟಕ |
| | ಕಾಸರಗೋಡು | : ಮಹಿಳಾ ಘಟಕ |
| **ರಕ್ತದಾನ ವೇದಿಕೆ** | : ದಕ್ಷಿಣ ಕನ್ನಡ | : ಶ್ರೀ ರಾಜೇಶ್ ಪಾಟೀಲ್ |
| | ಕಾಸರಗೋಡು | : ಶ್ರೀ ರಾಜೇಶ್ ಎಡನೀರು |
| **ಸಭಾ ನಡವಳಿ ದಾಖಲೆ :** | | |
| **ವಾರ್ತಾ ಪ್ರಸಾರ** | : ದಕ್ಷಿಣ ಕನ್ನಡ | : ಶ್ರೀ ಹರಿಶ್ಚಂದ್ರ ಜಾಧವ್ |
| ಕಾಸರಗೋಡು | : ಶ್ರೀ ಪ್ರೇಮಲತಾ ವೈ. ರಾವ್, ಕಾಸರಗೋಡು | |
| **ಆಂತರಿಕ ಲೆಕ್ಕ ಪರಿಶೋಧನೆ** | | : ಶ್ರೀ ಗಂಗಾಧರ ವಾಗ್ಮಾನ್, ಮಂಗಳೂರು |
| | | ಶ್ರೀ ಉದಯ ಶಂಕರ್ ಜಾಧವ್, ಮಂಕಿಸ್ಟ್ಯಾಂಡ್ |
| **ಜಮೀನು/ ಸಮುದಾಯ ಭವನ ನಿರ್ವಹಣೆ /ಪ್ರಚಾರ** | | : ಶ್ರೀ ನಾರಾಯಣ ರಾವ್ ಲಾಡ್ |
| **ಅಂತರ್ಜಾಲ ತಾಣ / ಸಾಮಾಜಿಕ ಮಾಧ್ಯಮ** | | : ಶ್ರೀಮತಿ ಯಶ್ವತ ಧರೇಕರ್, ಎಕ್ಕೂರು |

**ಮಲ್ಲ/ಶೃಂಗೇರಿ ಕಾರ್ಯಕ್ರಮ** : ಶ್ರೀ ನಾಗರಾಜ್ ಸಿಂಧ್ಯಾ

**ಸಾಂಸ್ಕೃತಿಕ ಕಾರ್ಯಕ್ರಮ** : ಶ್ರೀ ದಿವ್ಯಾ ಪವಾರ್
ಮಹಿಳಾ ಘಟಕ
ಯುವ ವೇದಿಕೆ

**ವಿದ್ಯಾರ್ಥಿ ವೇತನ/ ಪ್ರತಿಭಾ ಪುರಸ್ಕಾರ** : ಶ್ರೀ ಪುರುಷೋತ್ತಮ್ ಬಹುಮಾನ್

**ಉದ್ಯೋಗ/ ಶಿಕ್ಷಣ /ಸರಕಾರಿ ಸೌಲಭ್ಯಗಳ ಮಾಹಿತಿ**

: ದಕ್ಷಿಣ ಕನ್ನಡ : ಶ್ರೀ ಶಿಶುಪಾಲ್ ರಾವ್ ಭೋಂಸ್ಲೆ, ಅಳಪೆ
ಕಾಸರಗೋಡು ಶ್ರೀ ಯತೀಶ್ ಕುಮಾರ್ ಪಾಟೀಲ್

**ನಿವೇಶನ ಖರೀದಿ ಸಮಿತಿ** : ಸಂಚಾಲಕರು : ಶ್ರೀ ಸಂಜೀವ ರಾವ್ ಸಿಂಧ್ಯಾ, ಬೋಳಾರ
ಶ್ರೀ ಗುರುರಾಜ್ ಚಂದ್ರಮಾನ್, ಎಮ್ಮೆಕೆರೆ

## ಕಾರ್ಯಕ್ರಮಗಳು

**ಅಂಬಾಭವಾನಿ ಎಜ್ಯುಕೇಷನ್ ಟ್ರಸ್ಟ್:**

ಸಮಾಜ ಸಂಘದ ವತಿಯಿಂದ ಪ್ರಾರಂಭಗೊಂಡು ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಬಡ್ಡಿರಹಿತ ಸಾಲದ ರೂಪದಲ್ಲಿ ಧನಸಹಾಯ ಮಾಡುವ ಹಾಗೂ ಇತರ ಉನ್ನತ ಉದ್ದೇಶಗಳನ್ನು ಇಟ್ಟುಕೊಂಡು ಅಂಬಾಭವಾನಿ ಎಜ್ಯುಕೇಷನ್ ಟ್ರಸ್ಟ್ 2004 ರಲ್ಲಿ ಅಂದಿನ ಗೌರವಾಧ್ಯಕ್ಷರಾದ ದಿ| ಎ. ಎಲ್ಲೋಜಿ ರಾವ್ ಕೌಮಾರ್‌ರವರ ಆರಂಭಿಕ ಕೊಡುಗೆ ರೂ.25,000/– ದೊಂದಿಗೆ ಪ್ರಾರಂಭಿಸಲಾಯಿತು. ನಿವಾಸಿ ಹಾಗೂ ಅನಿವಾಸಿ ಬಂಧುಗಳ ಪೂರ್ಣ ಸಹಕಾರದಿಂದ ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ. ಇದುವರೆಗೆ 24 ವಿದ್ಯಾರ್ಥಿಗಳು ಟ್ರಸ್ಟ್‌ನಿಂದ ವಿವಿಧ ಕೋರ್ಸುಗಳಿಗೆ ರೂ. 18 ಲಕ್ಷಕ್ಕೂ ಅಧಿಕ ಮೊತ್ತದ ಬಡ್ಡಿರಹಿತ ಸಾಲ ಪಡೆದಿರುತ್ತಾರೆ. ವರದಿ ವರ್ಷದಲ್ಲಿ 5 ಮಂದಿ ವಿದ್ಯಾರ್ಥಿಗಳಿಗೆ ಸಾಲ ನೀಡಲಾಗಿದೆ. ಪ್ರಸ್ತುತ ಎಜ್ಯುಕೇಶನ್ ಟ್ರಸ್ಟ್‌ನಲ್ಲಿ 28 ಟ್ರಸ್ಟಿಗಳಿದ್ದು ಬಿ.ಜೆ. ಚಂದ್ರಶೇಖರ ಪಾಟೀಲ್ ಇದರ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಲೆಕ್ಕ ಪತ್ರವನ್ನು ಪ್ರತ್ಯೇಕವಾಗಿ ಲಗ್ತೀಕರಿಸಲಾಗಿದೆ.

| | | | |
|---|---|---|---|
| 1. | ಪ್ರತೀಕ್ಷಾ | M.Sc. | Rs. 50,000/- |
| 2. | ನಿಧಿ | MBA | Rs. 1,00,000/- |
| 3. | ಅನನ್ಯ | MBA | Rs. 1,00,000/- |
| 4. | ಹರ್ಷಿತಾ | B.Ed. | Rs. 40,000/- |
| 5. | ಸುರಕ್ಷಾ | MBA | Rs. 29,000/- |

**ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ, ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಸಹಾಯಧನ, ಸಾಧಕರ ಸನ್ಮಾನ, ದಿ| ಎಡ್ವೋಕೇಟ್ ಎಲ್ಲೋಜಿ ರಾವ್ ಸಂಸ್ಮರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ:**

ಸಂಘದ ಯೋಜಿತ ಕಾರ್ಯಕ್ರಮಗಳಲ್ಲಿ ಪ್ರಮುಖವಾಗಿರುವ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆ, ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಸಹಾಯಧನ, ಸಂಸ್ಮರಣೆ ಕಾರ್ಯಕ್ರಮ ದಿನಾಂಕ 29–10–2023ರ ಭಾನುವಾರದಂದು ಆರ್ಯ ಮರಾಠ ಭವನದಲ್ಲಿ ಜರಗಿತು.

ಮಂಗಳಾದೇವಿ ಶ್ರೀ ರಾಮಕೃಷ್ಣ ಮಠದ ಸಂಯೋಜಕರಾದ ಶ್ರೀ ರಂಜನ್ ಬೆಳ್ಳರ್ಪಾಡಿ, ಮಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀ ಸುಧೀರ್ ಶೆಟ್ಟಿ ಕಣ್ಣೂರು, ಪಾಲಿಕೆ ಸದಸ್ಯೆ ಶ್ರೀಮತಿ ವೀಣಾ ಮಂಗಳ, ಕಾರ್ಕಳ ಬಜಗೋಳಿಯ ಉದ್ಯಮಿಗಳಾದ ಶ್ರೀ ಉಮೇಶ್ ರಾವ್ ಮೋರೆ, ಶ್ರೀ ಮೂಕಾಂಬಿಕಾ ದೇವಸ್ಥಾನ ಕೊಲ್ಲೂರಿನ ಸಹಾಯಕ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀಮತಿ ಪುಷ್ಪಲತಾ ಕಟ್ವಾಟ್, ಆಸ್ಟ್ರೇಲಿಯಾ ಫೋಕಸ್ ಫೈರ್ & ಸೇಫ್ಟಿ ಅಡಿಟರ್ಸ್‌ನ ಮೆನೇಜರ್ ಶ್ರೀ ಜೆ.ಸಿ. ಮದನ್ ರಾಜ್ ಪಾಟೀಲ್, ಆರ್ಯ ಸಮುದಾಯ ಸಂಘ (ರಿ.) ಕಾಸರಗೋಡು ಇದರ ಅಧ್ಯಕ್ಷರಾದ ಶ್ರೀ ಗಿರಿಧರ್ ರಾವ್ ವಾಗ್ಮಾನ್, ಎಡ್ವೋಕೇಟ್ ಎಲ್ಲೋಜಿ ರಾವ್ ಮೆಮೋರಿಯಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀಮತಿ ಪ್ರೇಮಲತಾ ವೈ. ರಾವ್, ಅಂಬಾ ಭವಾನಿ ಎಜುಕೇಶನಲ್ ಟ್ರಸ್ಟ್‌ನ

ಕಾರ್ಯದರ್ಶಿ ಶ್ರೀ ಬಿ.ಜೆ. ಚಂದ್ರಶೇಖರ್ ಪಾಟೀಲ್, ರಾಯಲ್ ಆರ್ಯಾಸ್ ದುಬೈ ಪ್ರತಿನಿಧಿ ಶ್ರೀ ಜತಿನ್ ರಾವ್ ಜಾಧವ್, ಕರ್ನಾಟಕ ಮೆರೈನ್ ಏಜೆನ್ಸಿಸ್, ಬಂದರು ಮಂಗಳೂರು ಮಾಲಕರಾದ ಶ್ರೀ ಸಂಜೀವ ರಾವ್ ಸಿಂಧ್ಯಾ, ಜಯ ಜ್ಯುವೆಲ್ಲರ್ಸ್ ಮಾರ್ಕೆಟ್‌ರೋಡ್ ಮಾಲಕರಾದ ಶ್ರೀಮತಿ ಮೋಹಿನಿ ಜಯರಾಂ ಘೋರ್ಪಡೆ, ಮಂಗಳೂರು ಇಲೆಕ್ಟ್ರಿಕಲ್ಸ್ ಮಂಗಳೂರು ಇದರ ಮಾಲಕ ಶ್ರೀ ಸುಧಾಕರ್ ರಾವ್ ಬಹುಮಾನ್ ಅತಿಥಿಗಳಾಗಿದ್ದರು.

ಕಾಸರಗೋಡು ಮಂಗಳೂರು ಸೇರಿದಂತೆ 2022–23 ಸಾಲಿನಲ್ಲಿ SSLC, PUC, Degree, Master Degree, Engineering ವಿಭಾಗಗಳಲ್ಲಿ ಅತೀ ಹೆಚ್ಚು ಅಂಕ ಪಡೆದ / ಶೇಕಡಾ 90ಕ್ಕಿಂತ ಅಧಿಕ ಅಂಕ ಗಳಿಸಿ ತೇರ್ಗಡೆಯಾದ 24 ಮಂದಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದಿಂದ 87 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ 12 ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಿಸಲಾಯಿತು. ಎಡ್ವೋಕೇಟ್ ಎಲ್ಲೋಜಿ ರಾವ್ ಮೆಮೋರಿಯಲ್ ಟ್ರಸ್ಟ್ ವತಿಯಿಂದ 11 ವಿದ್ಯಾರ್ಥಿಗಳಿಗೆ ಹಾಗೂ ರಾಯಲ್ ಆರ್ಯಾಸ್ ದುಬೈ ವತಿಯಿಂದ 15 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮಾಜದ ಸಾಧಕರನ್ನು ಗೌರವಿಸಲಾಯಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಉಡುಪಿ ಜಿಲ್ಲಾ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದ ಶ್ರೀ ಮೋಹನ್ ರಾವ್ ಇವರನ್ನು ಗೌರವಿಸಲಾಯಿತು. ಬಳಿಕ ವಿವಿಧ ವಲಯಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.

**ಮಲ್ಲ ಹಾಗೂ ಶೃಂಗೇರಿ ಕಾರ್ಯಕ್ರಮ:**

ನಮ್ಮ ಸಮಾಜದ ಬಾಂಧವರು ಅನಾದಿ ಕಾಲದಿಂದಲೂ ಆರಾಧಿಸಿಕೊಂಡು ಬರುತ್ತಿರುವ ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸನ್ನಿಧಿಯಲ್ಲಿ ಸೇರಿ ಸಾಮೂಹಿಕ ಪ್ರಾರ್ಥನೆ, ಒಂದು ದಿನದ ಪೂಜೆ ಮತ್ತು ಅನ್ನಸಂತರ್ಪಣೆಯನ್ನು ನಡೆಸಿಕೊಂಡು ಬರುತ್ತಿರುವ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದು ಈ ವರ್ಷದ ದಿನಾಂಕ 4–03–2024 ರಂದು ಸದ್ರಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಪದಾಧಿಕಾರಿಗಳು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಮಾಜ ಬಂಧುಗಳು ಭಾಗವಹಿಸಿ ಶ್ರೀ ದುರ್ಗಾಪರಮೇಶ್ವರಿ ತಾಯಿಯ ಕೃಪೆಗೆ ಪಾತ್ರರಾದರು. ಈ ನಿಮಿತ್ತ ತಗಲಿದ ಖರ್ಚನ್ನು ಸಂಘದ ವತಿಯಿಂದಲೇ ಭರಿಸಲಾಯಿತು. ಸಂಸ್ಕೃತಿ ಹಾಗೂ ಪರಂಪರೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಪ್ರತಿವರ್ಷದಂತೆ ಈ ವರ್ಷವು ಕೂಡಾ ದಿನಾಂಕ 10–03–2024 ರಂದು ಶೃಂಗೇರಿ ಶಾರದಾಂಬೆಗೆ ಪೂಜೆ ಸಲ್ಲಿಸಿ ಬಳಿಕ ಶ್ರೀ ಗುರುಪೀಠವನ್ನು ಸಂದರ್ಶಿಸಿ ಜಗದ್ಗುರುಗಳ ಪಾದ ಪೂಜೆ ಮಾಡಿ ಗುರು ಕಾಣಿಕೆ ಸಲ್ಲಿಸಿ ಮಂತ್ರಾಕ್ಷತೆಯನ್ನು ಪಡೆದು ಕ್ಷೇತ್ರದ ಅನ್ನಪ್ರಸಾದ ಸೇವಿಸಿ ಶ್ರೀ ಶಾರದಾಂಬೆಯ ಕೃಪೆಗೆ ಪಾತ್ರರಾದೆವು.

**ಶಿವಾಜಿ ಜಯಂತಿ ಆಚರಣೆ ಕಾರ್ಯಕ್ರಮ :**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದ.ಕ. ಜಿಲ್ಲೆ, ಆರ್ಯ ಯಾನೆ ಮರಾಠ ಸಮಾಜ ಸಂಘ ರಿ. ಮತ್ತು ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್ ದ.ಕ. ಜಿಲ್ಲಾ ಘಟಕ ಇವರುಗಳ ಸಂಯುಕ್ತ ಆಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 397ನೇ ಜಯಂತ್ಯೋತ್ಸವವನ್ನು ದಿನಾಂಕ 19–02–2024ರಂದು ಮಂಗಳೂರಿನ ಪುರಭವನದಲ್ಲಿ ಆಚರಿಸಲಾಯಿತು.

ವಿಶ್ರಾಂತ ಪ್ರಾಧ್ಯಾಪಕರಾದ ಡಾ। ಪುಂಡಿಕಾಯ್ ಗಣಪತಿ ಭಟ್‌ರವರು ಶಿವಾಜಿ ಮಹಾರಾಜರ ಬಗ್ಗೆ ಉಪನ್ಯಾಸ ನೀಡಿದರು. ಬಳಿಕ ಸಮಾಜ ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇಲಾಖಾ ಅಧಿಕಾರಿಗಳು, ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಸಮಾಜ ಬಾಂಧವರು ಉಪಸ್ಥಿತರಿದ್ದರು.

**ಆರ್ಯ ಮರಾಠ ಭವನ :**

ಸಮಾಜ ಸಂಘವು ಎಲ್ಲಾ ಸಮಾರಂಭಗಳಿಗೆ ಹೊಂದುವಂತೆ ಸುಮಾರು 750 ಆಸನ ಸಾಮರ್ಥ್ಯದ ಸುಸಜ್ಜಿತ ಸಭಾಭವನ **'ಆರ್ಯ ಮರಾಠ ಭವನ'** ಹೊಂದಿದ್ದು ಅದರ ದಿನದ ಬಾಡಿಗೆ ಹಾಗೂ ಇತರ ನಿಯಮಗಳು ನಮ್ಮ ಸಮುದಾಯದವರಿಗೆ ಈ ಕೆಳಗಿನಂತಿದೆ.

| | | |
|---|---|---|
| 1. | ದಿನದ ಬಾಡಿಗೆ ಬೆಳಿಗ್ಗೆ 6 ರಿಂದ ಸಂಜೆ 4 ರವರೆಗೆ | ರೂ. 25,000/– |
| 2. | ಸಂಜೆಯ ಬಾಡಿಗೆ ಸಮಯ ಸಂಜೆ 6 ರಿಂದ ರಾತ್ರಿ 10.30 ರ ವರೆಗೆ | ರೂ. 15,000/– |
| 3. | 2ನೇ ಅಂತಸ್ತಿನ ಭೋಜನ ಶಾಲೆಯನ್ನು ಕಾಯ್ದಿರಿಸುವುದಾದರೆ ದಿನಕ್ಕೆ/ರಾತ್ರಿಗೆ | ರೂ. 10,000/– ಬಾಡಿಗೆ |

4. 2ನೇ ಅಂತಸ್ತಿನ ಭೋಜನ ಶಾಲೆಯನ್ನು ವೈಕುಂಠ ಸಮಾರಾಧನೆಗಾಗಿ
ಉಪಯೋಗಿಸುವುದಾದರೆ ದಿನಕ್ಕೆ / ರಾತ್ರಿಯ ಬಾಡಿಗೆ ರೂ 5,000/–ಮಾತ್ರ,
ಈ ಹಾಲಿನ ಜೊತೆಗೆ 1ನೇ ಮಹಡಿಯ ಮುಖ್ಯ ಸಭಾಂಗಣ ಕೂಡಾ
ಉಪಯೋಗಿಸುವುದಾದರೆ ಬಾಡಿಗೆ ರೂ. 15,000/–.

5. ಮಹಾಸಭೆಯ ತೀರ್ಮಾನದಂತೆ ಕಟ್ಟಡ ನಿರ್ಮಾಣಕ್ಕಾಗಿ ರೂ. 2 ಲಕ್ಷ ಮತ್ತು ಅದಕ್ಕಿಂತ ಅಧಿಕ ದೇಣಿಗೆ ನೀಡಿದವರು ದಿನಾಂಕ 01–04–2017 ರಿಂದ ಪ್ರಾರಂಭವಾಗಿ ವರ್ಷಕ್ಕೊಮ್ಮೆ (ಅಂದರೆ ಹಣಕಾಸಿನ ವರ್ಷ ಎಪ್ರಿಲ್ 1 ರಿಂದ ಮುಂದಿನ ಮಾರ್ಚ್ 31 ರ ತನಕ) ಸಮುದಾಯ ಭವನವನ್ನು ಬಾಡಿಗೆ ರಹಿತ ಅಂದರೆ ರೂ.10,000/– ವನ್ನು ಇತರೇ ವೆಚ್ಚಗಳಿಗಾಗಿ ಪಾವತಿಸಿ ತಮ್ಮ ಉಪಯೋಗಕ್ಕಾಗಿ ಬಳಸಿಕೊಳ್ಳಬಹುದು.

6. ಮಹಾಸಭೆಯ ತೀರ್ಮಾನದಂತೆ ರೂ. 1 ಲಕ್ಷ ದಿಂದ ರೂ. 5 ಲಕ್ಷದ ವರೆಗೆ ದೇಣಿಗೆ ನೀಡಿದವರು ದಿನಾಂಕ 01–04–2017 ರಿಂದ ಪ್ರಾರಂಭವಾಗಿ 2 ಆರ್ಥಿಕ ವರ್ಷಗಳಿಗೊಮ್ಮೆ ಭವನವನ್ನು ಬಾಡಿಗೆ ರಹಿತವಾಗಿ ತಮ್ಮ ಉಪಯೋಗಕ್ಕೆ ಬಳಸಿಕೊಳ್ಳ ಬಹುದು. ಬಾಡಿಗೆ ರಹಿತ ಅಂದರೆ ರೂ.10,000 ವನ್ನು ಇತರೇ ಖರ್ಚುಗಳಿಗಾಗಿ ಪಾವತಿಸಬೇಕು.

7. ದೇಣಿಗೆ ನೀಡಿದವರಿಗೆ ನೀಡುವ ಸವಲತ್ತನ್ನು ಅವರ ಮನೆಯವರ ಯಾವುದೇ ಸಮಾರಂಭಗಳಿಗೆ ಉಪಯೋಗಿಸಬಹುದು. ಈ ಸವಲತ್ತನ್ನು ನಮ್ಮ ಸಮಾಜದ ಬಂಧುಗಳಿಗಾಗಿ ಉಪಯೋಗಿಸುವುದಾದರೆ, ಮದುವೆ ಸಮಾರಂಭದ ಹೊರತಾಗಿ ಇತರ ಯಾವ ಸಮಾರಂಭಕ್ಕೂ ಈ ಸವಲತ್ತನ್ನು ಉಪಯೋಗಿಸುವಂತಿಲ್ಲ

8 ಮೇಲೆ ಹೇಳಿದ ಸವಲತ್ತುಗಳನ್ನು ಅದೇ ಆರ್ಥಿಕ ವರ್ಷದಲ್ಲಿಯೇ ಉಪಯೋಗಿಸತಕ್ಕದ್ದು, ಇಲ್ಲವಾದಲ್ಲಿ ಆ ಸವಲತ್ತುಗಳನ್ನು ಮುಂದಿನ ವರ್ಷಕ್ಕೆ ಕ್ಯಾರಿ ಓವರ್ ಮಾಡಲಾಗುವುದಿಲ್ಲ.

**ಸಮುದಾಯದ ಭವನದ ದಿನದ ಬಾಡಿಗೆ ಹಾಗೂ ಇತರ ನಿಯಮಗಳು ಇತರ ಸಮುದಾಯದವರಿಗೆ**

1. ದಿನದ ಬಾಡಿಗೆ ಬೆಳಿಗ್ಗೆ 6 ರಿಂದ ಸಂಜೆ 4 ರವರೆಗೆ ರೂ. 30,000

2. ಸಂಜೆಯ ಬಾಡಿಗೆ ಸಂಜೆ 6 ರಿಂದ ರಾತ್ರಿ 10.30 ರವರೆಗೆ ರೂ. 20,000

3. 2ನೇ ಅಂತಸ್ತಿನ ಭೋಜನ ಶಾಲೆಯನ್ನು ಮಾತ್ರ ಕಾಯ್ದಿರಿಸುವುದಾದಾರೆ ದಿನಕ್ಕೆ/ರಾತ್ರಿಗೆ ಬಾಡಿಗೆ ರೂ. 10,000

4. 2ನೇ ಅಂತಸ್ತಿನ ಭೋಜನ ಶಾಲೆಯನ್ನು ವೈಕುಂಠ ಸಮಾರಾಧನೆಗಾಗಿ
ಉಪಯೋಗಿಸುವುದಾದರೆ ಬಾಡಿಗೆ ರೂ. 7,000
ಮೇಲಿನ ಹಾಲಿನ ಜೊತೆಗೆ 1ನೇ ಅಂತಸ್ತಿನ ಮುಖ್ಯ ಸಭಾಂಗಣವನ್ನು ಕೂಡಾ
ಉಪಯೋಗಿಸುವುದಾದರೆ ಬಾಡಿಗೆ ರೂ. 15,000

**ಸಮುದಾಯದ ಬಂಧುಗಳು ಹಾಗೂ ಇತರರಿಗೂ ಅನ್ವಯಿಸುವ ಸಮಾನ ನಿಯಮಗಳು ಈ ರೀತಿ ಇವೆ.**

1. ಬಾಡಿಗೆಯ ಹಣವನ್ನು ಸಂಪೂರ್ಣವಾಗಿ ಭವನವನ್ನು ಕಾಯ್ದಿರಿಸುವಾಗಲೇ ಪಾವತಿಸತಕ್ಕದ್ದು. ಹಣವನ್ನು ಪಾವತಿಸದಿದ್ದಲ್ಲಿ ಭವನವನ್ನು ಕಾಯ್ದಿರಿಸಲಾಗುವುದಿಲ್ಲ. ಬಾಡಿಗೆಯ ಹಣದೊಂದಿಗೆ ರೂ.5000/– ನ್ನು ಭದ್ರತಾ ಠೇವಣಿಯಾಗಿ ಪಾವತಿಸತಕ್ಕದ್ದು. ಸಮಾರಂಭದ ಸಮಯದಲ್ಲಿ ಭವನದ ಸಾಮಾಗ್ರಿಗಳಿಗೆ ಹಾನಿಯಾದಲ್ಲಿ ನಿಮ್ಮ ಭದ್ರತಾ ಠೇವಣಿಯಿಂದ ಹಾನಿಯನ್ನು ಸರಿ ಪಡೆಸುವುದಕ್ಕಾಗಿ ಬೇಕಾದ ಹಣವನ್ನು ಹಿಡಿದುಕೊಂಡು ಉಳಿದ ಹಣವನ್ನು ಸಮಾರಂಭದ ನಂತರ ಹಿಂತಿರುಗಿಸಲಾಗುವುದು. ಒಂದು ವೇಳೆ ಸಾಮಾಗ್ರಿಗಳ ಹಾನಿ ರೂ.5000/– ಕ್ಕಿಂತ ಹೆಚ್ಚಾದರೆ ಆ ಹಣವನ್ನು ಭವನದಿಂದ ನಿರ್ಗಮಿಸುವ ಮೊದಲೇ ಭರಿಸ ಬೇಕು.

2. ಭವನದಲ್ಲಿ ಯಾವ ಸಮಾರಂಭದ ಸಮಯದಲ್ಲಿಯೂ ಮದ್ಯವನ್ನು ಉಪಯೋಗಿಸುವ ಹಾಗಿಲ್ಲ.

3. ರಾತ್ರಿಯ ಸಮಾರಂಭದ ಸಮಯದಲ್ಲಿ ಧ್ವನಿವರ್ಧಕವನ್ನು ರಾತ್ರಿ 10.30ರ ನಂತರ ಉಪಯೋಗಿಸುವ ಹಾಗಿಲ್ಲ ಮತ್ತು 10.30ಕ್ಕೆ ಭವನದಿಂದ ನಿರ್ಗಮಿಸ ತಕ್ಕದ್ದು.

4. ಮದುವೆ ಸಮಾರಂಭಕ್ಕೆ ಭವನವನ್ನು ಕಾಯ್ದಿರಿಸುವವರು, ಮದುವೆಯ ಮುಂಚಿತವಾಗಿ ಸಂಘದ ಕಚೇರಿಗೆ ಮದುವೆಯ ಆಮಂತ್ರಣ ಪತ್ರಿಕೆಯ ಜೊತೆಗೆ ವಧು ವರರ ಭಾವ ಚಿತ್ರ ಮತ್ತು ಆಧಾರ್ ಕಾರ್ಡ್ ಯಾ ವೋಟರ್ ಐ.ಡಿ. ಕಾರ್ಡ್‌ನ ಪ್ರತಿಯನ್ನು ತಪ್ಪದೇ ನೀಡತಕ್ಕದ್ದು. (ಇದು ಸರಕಾರದ ಕಾಯ್ದೆ/ನಿಯಮ).

ವಿವಾಹದ ನಂತರ ಅದರ ಪ್ರಮಾಣ ಪತ್ರವನ್ನು (Marriage Certificate) ನ್ನು ಸಂಘದ ಕಾರ್ಯಾಲಯದಲ್ಲಿ ಪಡೆದು ಕೊಳ್ಳಬಹುದು.

5. ಭವನವನ್ನು ಕಾಯ್ದಿರಿಸಿದ ದಿನದಲ್ಲಿ ನಿಮ್ಮ ಕಾರ್ಯಕ್ರಮಗಳು ನಡೆಯದಿದ್ದಲ್ಲಿ, ಬಾಡಿಗೆಯ ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಆದರೆ ಕಾಯ್ದಿರಿಸಿ ರದ್ದು ಮಾಡಿದ ದಿನದಂದು ಇತರರು ಕಾಯ್ದಿರಿಸಲು ಬಂದಲ್ಲಿ ನೀಡಿದ ಬಾಡಿಗೆ ಹಣದಲ್ಲಿ ರೂ.5000/– ವನ್ನು ವಜಾಮಾಡಿ ಉಳಿದ ಹಣವನ್ನು ನಿಮಗೆ ಹಿಂತಿರುಗಿಸಲಾಗುವುದು.

**"ಸಮಾಜ ಬಾಂಧವರು ವಿವಾಹ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ನಮ್ಮ ಸಮುದಾಯ ಭವನದಲ್ಲಿ ನಡೆಸುವುದರ ಮೂಲಕ ಸಂಘ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ."**

### ಆರ್ಯ ಮರಾಠ ಭವನದಲ್ಲಿ ನಡೆದ ಸಮಾರಂಭಗಳ ವಿವರ:

ಜೂನ್ 1, 2023ರಿಂದ ಮೇ 31, 2024ರ ತನಕ ಆರ್ಯ ಮರಾಠ ಭವನದಲ್ಲಿ ಈ ಕೆಳಗಿನ ಸಮಾರಂಭಗಳು ಜರಗಿದವು.

| | ಮದುವೆ | | ದೇವತಾಕಾರ್ಯ /ಮೆಹೆಂದಿ | | ಸೀಮಂತ | | ಆರತಕ್ಷತೆ / ರಿಸೆಪ್ಶನ್ | | ಮದುವೆ ನಿಶ್ಚಿತಾರ್ಥ | | ಉತ್ತರಕ್ರಿಯೆ | | ಸಭೆ/ಇತರ ಕಾರ್ಯಕ್ರಗಳು | |
|---|---|---|---|---|---|---|---|---|---|---|---|---|---|---|
| | 22-23 | 23-24 | 22-23 | 23-24 | 22-23 | 23-24 | 22-23 | 23-24 | 22-23 | 23-24 | 22-23 | 23-24 | 22-23 | 23-24 |
| ಸಮಾಜ ಬಾಂಧವರು | 09 | 08 | 05 | 05 | 04 | 02 | 04 | 03 | 01 | – | – | – | 04 | 04 |
| ಇತರ ಸಮಾಜ | 11 | 05 | 06 | 01 | 03 | 05 | 06 | 07 | 02 | – | 12 | 13 | 01 | 05 |
| **ಒಟ್ಟು** | **20** | **13** | **11** | **06** | **07** | **07** | **10** | **10** | **03** | **–** | **12** | **13** | **05** | **09** |

ಮೇಲಿನ ಅಂಕಿ ಅಂಶಗಳು ಸೂಚಿಸುವಂತೆ ಸಮಾಜ ಬಾಂಧವರು ಆರ್ಯಮರಾಠ ಭವನದಲ್ಲಿ ಕೇವಲ ಬೆರಳೆಣಿಕೆಯ ಸಮಾರಂಭಗಳನ್ನು ಆಯೋಜಿಸಿರುತ್ತಾರೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಸಮಾರಂಭಗಳನ್ನು ಏರ್ಪಡಿಸಿ ಸಮಾಜ ಸಂಘದ ಬೆಳವಣಿಗೆಗೆ ಸಹಕರಿಸಬೇಕೆಂದು ಕಳಕಳಿಯ ಕೋರಿಕೆ.

### ಆರ್ಯ ಮರಾಠ ಭವನದ ಕಾಮಗಾರಿಗಳು / ಮುಂದಿನ ಕಾರ್ಯ ಯೋಜನೆಗಳು:

ಕಂಪೌಂಡ್ ಏರಿಸುವುದು ಹಾಗೂ ಮಳೆ ನೀರು ಹರಿದು ಹೋಗಲು ವ್ಯವಸ್ಥೆಯನ್ನು ಕಲ್ಪಿಸುವುದು. ಸಿಸಿ ಟಿವಿ ಅಳವಡಿಸುವುದು, ಆರ್ಯ ಮರಾಠ ಭವನದ ಎಲಿವೇಶನ್ ಹಾಗೂ ಸೌಂದರ್ಯ ವೃದ್ಧಿ, ಪ್ರಸ್ತುತ ಇರುವ ಪಾರ್ಕಿಂಗ್ ಸ್ಥಳದ ಪೂರ್ವ ಪಾರ್ಶ್ವದಲ್ಲಿ ವಾಣಿಜ್ಯ ಕಟ್ಟಡವಾಗಿ ಪರಿವರ್ತಿಸುವುದು. ನೂತನ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಹಾಗೂ ಹಾಸ್ಟೆಲ್ ನಿರ್ಮಿಸುವುದು. ಶಾಶ್ವತ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು. ವಿದ್ಯುತ್ ಅಗತ್ಯಕ್ಕಾಗಿ ಸೋಲಾರ್ ಪ್ಯಾನಲ್ ಅಳವಡಿಸುವುದು.

### ಇತರ ವಿಚಾರಗಳು:

- ಲಿಫ್ಟ್‌ನ ವಾರ್ಷಿಕ ನಿರ್ವಹಣಾ ಒಪ್ಪಂದವನ್ನು ನವೀಕರಣಗೊಳಿಸಲಾಯಿತು.
- ಯುವವೇದಿಕೆಗೆ 2 ವರ್ಷಕ್ಕೊಮ್ಮೆ ಒಂದು ಕಾರ್ಯಕ್ರಮ ರಿಯಾಯಿತಿ ದರದಲ್ಲಿ (ರೂ. 10,000/–) ನೀಡುವುದು.
- ಸಮುದಾಯ ಭವನದಲ್ಲಿ ವಿಶೇಷ ಸಂದರ್ಭ / ಕಾರ್ಯಕ್ರಮದಲ್ಲಿ ನಿಬಂಧನೆಗೊಳಪಟ್ಟು ಮದ್ಯಪಾನಕ್ಕೆ ಅವಕಾಶ ನೀಡುವುದು.
- ಸಮಾಜ ಭವನದ ಪ್ರವೇಶ ದ್ವಾರದಲ್ಲಿ ರೂ. 50,000/– ವೆಚ್ಚದಲ್ಲಿ ಕಬ್ಬಿಣದ ಗೇಟ್ ಅಳವಡಿಸಲಾಯಿತು.

### ಮಹಿಳಾ ಘಟಕ:

ಸಮಾಜ ಸಂಘದ ಮಾರ್ಗದರ್ಶನದಲ್ಲಿ ಸಮಾಜದ ಮಹಿಳಾ ಘಟಕದ ಸಂಚಾಲಕಿಯಾಗಿ ಶ್ರೀಮತಿ ಪೂರ್ಣಿಮ ಚಂದ್ರಮಾನ್ ಅವರೊಂದಿಗೆ ಉಪಸಂಚಾಲಕಿಯಾಗಿ ಶ್ರೀಮತಿ ವಾಣಿ ಮೋರೆ ಜೆಪ್ಪು ಹಾಗೂ ಶ್ರೀಮತಿ ಅನನ್ಯ ಪಾಟೀಲ್ ಪರಂಗೋಡು

ಇವರುಗಳ ನೇತೃತ್ವದಲ್ಲಿ ಸಂಘಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತೇವೆ. ನಮ್ಮ ಸಮಾಜದ ಮಹಿಳೆಯರೆಲ್ಲರೂ ಸಂಘದ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎನ್ನುವುದೇ ನಮ್ಮ ಕಳಕಳಿಯ ವಿನಂತಿ.

**ಯುವ ವೇದಿಕೆ:**

ಯುವಶಕ್ತಿಯನ್ನು ಜೊತೆಗೂಡಿಸಿಕೊಂಡು ಹೋಗುವ ಉದ್ದೇಶದಿಂದ ಯುವವೇದಿಕೆಯನ್ನು ಹುಟ್ಟು ಹಾಕಲಾಗಿದ್ದು ಅವರುಗಳು ಕ್ರೀಡಾಕೂಟ ಸೇರಿದಂತೆ ಸಂಘದ ಎಲ್ಲಾ ಕಾರ್ಯಗಳಲ್ಲಿ ಸಹಕಾರ ನೀಡುತಿದ್ದಾರೆ. ಪ್ರಸ್ತುತ ಯುವ ವೇದಿಕೆಯ ಸಂಚಾಲಕರಾಗಿ ಶ್ರೀ ಧರ್ಮರಾಜ್ ಜಾಧವ್ ಮತ್ತು ಉಪ ಸಂಚಾಲಕರಾಗಿ ಶ್ರೀ ದೀಪಕ್ ಚಂದ್ರಮಾನ್ ಮತ್ತು ಶ್ರೀ ಸುನಿಲ್‌ರಾಜ್ ಜಾಧವ್ ಇವರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

**ವಲಯ ಸಮಿತಿಗಳು:**

ಪ್ರಸ್ತುತ ಕಾಸರಗೋಡು ಜಿಲ್ಲೆಯಲ್ಲಿ 6 ವಲಯ ಸಮಿತಿಗಳು ಹಾಗೂ ದ.ಕ. ಜಿಲ್ಲೆಯಲ್ಲಿ 4 ವಲಯ ಸಮಿತಿಗಳು ಕಾರ್ಯಾಚರಣೆಯಲ್ಲಿವೆ. ವಲಯಗಳ ಸೂಕ್ತ ಹಾಗೂ ಸಮಯೋಚಿತ ಕಾರ್ಯಚರಣೆಯಿಂದಲೇ ಸಂಘದ ಎಲ್ಲಾ ಕಾರ್ಯಕ್ರಮಗಳು ನೆರವೇರಲು ಸಾಧ್ಯವಾಗುತ್ತಿರುವುದು. ಕೆಲವು ಕಾರಣಗಳಿಂದಾಗಿ ಕೆಲವು ವಲಯಗಳಲ್ಲಿ ಚಟುವಟಿಕೆಗಳು ಕುಂಠಿತಗೊಂಡಿದ್ದು ಮುಂದಿನ ದಿನಗಳಲ್ಲಿ ವಲಯ ಸಮಿತಿಯನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು. ಎಲ್ಲಾ ವಲಯ ಸಂಚಾಲಕರಿಗೂ ಮತ್ತು ಸದಸ್ಯರುಗಳಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳು.

**ಪ್ರಸಕ್ತ ಸಾಲಿನಲ್ಲಿ (2023–24) ಕೊಡುಗೆ ರೂಪದಲ್ಲಿ (ರಿಯಾಯಿತಿ ದರ ರೂ.10,000/–) ಆರ್ಯ ಮರಾಠ ಭವನದಲ್ಲಿ ಸಮಾರಂಭಗಳನ್ನು ಬುಕಿಂಗ್ ಮಾಡಿದವರ ವಿವರ:**

1. ಕೆ. ಶ್ರೀಧರ್ ರಾವ್ ಬಹುಮಾನ್, ಕುಂಪಲ
2. ಮಧುಸೂದನ್ ಪವಾರ್
3. ಗಿರೀಶ್ ರಾವ್ ಭೋಂಸ್ಲೆ
4. ಮೋಹನ್ ರಾವ್ ಭೋಂಸ್ಲೆ

**ಆರ್ಥಿಕ ವ್ಯವಸ್ಥೆ:**

ಸಮಾಜ ಸಂಘಕ್ಕೆ ಈಗ ತನ್ನದೇ ಆದ ಆರ್ಥಿಕ ಸಂಪನ್ಮೂಲವಿರುತ್ತದೆ. ಆರ್ಯ ಮರಾಠ ಭವನದಿಂದ ಬರುವ ಬಾಡಿಗೆಯೇ ಸಮಾಜ ಸಂಘದ ಆದಾಯದ ಮೂಲವಾಗಿದ್ದು, ಸಮಾಜ ಬಂಧುಗಳು ಹೆಚ್ಚಿನ ಸಮಾರಂಭಗಳನ್ನು ನಮ್ಮ ಭವನದಲ್ಲಿ ಆಯೋಜಿಸಿ ಸಮಾಜ ಸಂಘದ ಸಂಪನ್ಮೂಲವನ್ನು ಹೆಚ್ಚಿಸಿ ತನ್ಮೂಲಕ ಸಮಾಜ ಸೇವೆಗೆ ತಮ್ಮ ಕೊಡುಗೆಗಳನ್ನು ನೀಡಬೇಕಾಗಿ ಕಳಕಳಿಯ ವಿನಂತಿ. ಇದಕ್ಕೆ ಹೊರತಾಗಿ ಸಮಾಜ ಭವನದ ಮೇಲೆ ಅಳವಡಿಸಲಾದ ಹೋರ್ಡಿಂಗ್‌ನಿಂದ ಅಲ್ಪ ಆದಾಯ ಬರುತ್ತದೆ. ಆದರೂ ನಮ್ಮೆಲ್ಲಾ ಕೆಲಸಗಳನ್ನು ಪೂರ್ಣ ರೀತಿಯಲ್ಲಿ  ಮಾಡಲು ಆದಾಯದ ಕೊರತೆಯಿಂದ ಸಾಧ್ಯವಾಗುತ್ತಿಲ್ಲ. ಈಗ ನಡೆಯುತ್ತಿರುವ ಸಂಘದ ಹೆಚ್ಚಿನ ಕಾರ್ಯಕ್ರಮಗಳು ಸಂಘದ ಸದಸ್ಯರ ದೇಣಿಗೆಯಿಂದಲೇ ನಡೆಯುತ್ತಿರುತ್ತದೆ.

**ಆಸ್ತಿಯ ವಿವರ:**

ಸಂಘವು ಪ್ರಸ್ತುತ 28.75 ಸೆಂಟ್ಸ್ ಜಮೀನು ಹೊಂದಿದ್ದು. ಮೂಲಭೂತ ಸೌಕರ್ಯವಿರುವ 5000 ಚದರಡಿಯ 750 ಆಸನ ಸಾಮರ್ಥ್ಯದ ಸುವ್ಯವಸ್ಥಿತ ಸಮುದಾಯ ಭವನ ಅದೇ ಜಮೀನಿನಲ್ಲಿ ನಿರ್ಮಾಣವಾಗಿದೆ. ಈ ಬಾರಿ ಪಕ್ಕದ 15 ಸೆಂಟ್ಸ್ ನಿವೇಶನವನ್ನು ರೂ. 70,56,570/– ವೆಚ್ಚದಲ್ಲಿ ಖರೀದಿಸಲಾಗಿದೆ. ಪ್ರಸ್ತುತ ನಮ್ಮ ಆಸ್ತಿಯು 8ರಿಂದ 10 ಕೋಟಿ ಬೆಲೆಯನ್ನು ಹೊಂದಿರುತ್ತದೆ.

**ನೂತನ ನಿವೇಶನ ಖರೀದಿ ಸಮಿತಿ:**

ಸಂಘದ ಪ್ರಮುಖ ಯೋಜನೆಯಾದ ಸಂಘದ ಪಕ್ಕದ ನಿವೇಶನ ಖರೀದಿಯು ಹಲವು ವರ್ಷಗಳಿಂದ ಊರ್ಜಿತದಲ್ಲಿದ್ದು ಪ್ರಸ್ತುತ ಸಂಜೀವ ರಾವ್ ಸಿಂಧ್ಯ ಹಾಗೂ ಗುರುರಾಜ್ ಚಂದ್ರಮಾನ್ ಇದರ ಸಂಚಾಲಕತ್ವದಲ್ಲಿ ಸಂಘದ ಪಕ್ಕದಲ್ಲಿರುವ ದುರ್ಗಾದಾಸ್ ಭಂಡಾರಿಯವರ ಮಾಲಕತ್ವದ 15 ಸೆಂಟ್ಸ್ ನಿವೇಶನ ಮಾರಾಟಕ್ಕಿರುವ ವಿವರವನ್ನು ತಿಳಿದ ಸದಸ್ಯರು ಸಂಘದ ಗಮನಕ್ಕೆ ತಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಖರೀದಿಗೆ ಒಪ್ಪಿಗೆ ಸೂಚಿಸಿ ಸಂಚಾಲಕರುಗಳಿಗೆ ಜವಾಬ್ದಾರಿಯನ್ನು ನೀಡಿರುತ್ತದೆ.

ಸಂಚಾಲಕರುಗಳು ಈ ಬಗ್ಗೆ ನಿವೇಶನ ಮಾಲಕರನ್ನು ಸಂಪರ್ಕಿಸಿ ಮಾತುಕತೆ ನಡೆಸಿ ನಿವೇಶನ ಬೆಲೆ 62 ಲಕ್ಷ, ಸಿಂಗಲ್ ಸೈಟ್ ಹಾಗೂ ಇತರ ದಾಖಲೆಗಳ ವೆಚ್ಚ ರೂ. 3,12,850/– ಮತ್ತು ನೋಂದಣಿ ಶುಲ್ಕ ಹಾಗೂ ಇತರ ವೆಚ್ಚ ರೂ. 5,43,720/– ಸೇರಿ ಒಟ್ಟು ರೂ. 70,56,570/– ಕ್ಕೆ ಖರೀದಿ ಮಾಡಲಾಗಿದೆ. ದಿನಾಂಕ 3–5–2022ರಂದು ಸಂಘದ ಹೆಸರಿನಲ್ಲಿ ಮೇಲಿನ 15 ಸೆಂಟ್ಸ್ ನಿವೇಶನವು ನೋಂದಣಿಯಾಗಿರುತ್ತದೆ. ಪ್ರಸ್ತುತ ನಮ್ಮ ನಿವೇಶನ 28.75 ಸೆಂಟ್ಸ್ ಮತ್ತು ನೂತನ ನಿವೇಶನ 15 ಸೆಂಟ್ಸ್ ಸೇರಿ 43.75 ಸೆಂಟ್ಸ್ ಆಗಿರುತ್ತದೆ.

ನಿವೇಶನ ಖರೀದಿಗೆ ಅಷ್ಟೊಂದು ಮೊತ್ತ ಸಂಘದ ಖಾತೆಯಲ್ಲಿ ಇಲ್ಲದಿರುವುದರಿಂದ ಈ ಕೆಳಗಿನ ಸಮಾಜ ಬಾಂಧವರಿಂದ ಬಡ್ಡಿ ರಹಿತ ಸಾಲದ ರೂಪದಲ್ಲಿ ರೂ. 2 ಲಕ್ಷ ಹಾಗೂ ರೂ. 1 ಲಕ್ಷದಂತೆ ರೂ. 27 ಲಕ್ಷವನ್ನು ಹೊಂದಿಸಲಾಯಿತು.

**ರೂ.2 ಲಕ್ಷ**

1. ಪ್ರೇಮಲತಾ ವೈ. ರಾವ್, ಕಾಸರಗೋಡು
2. ವಾಮನ ರಾವ್ ವಾಗ್ಮಾನ್, ಮುಳ್ಳಂಗೋಡು
3. ಸಂಜೀವ ರಾವ್ ಸಿಂಧ್ಯ, ಬೋಳಾರ
4. ಬಿ.ಜೆ. ಚಂದ್ರಶೇಖರ್ ಪಾಟೀಲ್, ಕುಂಪಲ
5. ಮೋಹಿನಿ ಜಯರಾಮ್ ಘೋರ್ಪಡೆ, ಬಿಜೈ
6. ಜನ್ನೋಜಿ ರಾವ್ ಬೆಡೇಕರ್, ಮುಂಡ್ಕೂರು
7. ಉಮೇಶ್ ರಾವ್, ಬಜಗೋಳಿ
8. ಸುಧಾಕರ ರಾವ್ ಬಹುಮಾನ್, ಕಾರ್ಕಳ

**ರೂ. 1 ಲಕ್ಷ**

1. ಧನಂಜಯ ರಾವ್ ಬಹುಮಾನ್, ಕರ್ಮಾರ್
2. ಪ್ರದೀಪ್ ಚಂದ್ರ ಜಾಧವ್, ಮೆಟ್ಟಿಗೆಕಲ್ಲು
3. ಮೋಹನ್ ರಾವ್ ಭೋಂಸ್ಲೆ, ಎಕ್ಕೂರು
4. ನಾರಾಯಣ ರಾವ್ ಲಾಡ್, ಕುಂಪಲ
5. ಹರೀಶ್ ರಾವ್ ಲಾಡ್, ಮಂಗಳೂರು
6. ಗಂಗಾಧರ್ ರಾವ್ ವಾಗ್ಮಾನ್, ಮಂಗಳೂರು
7. ಯತೀಶ್ ಕುಮಾರ್ ಪಾಟೀಲ್, ಮುಳಿಯಾರು
8. ಮಹಾದೇವ್ ಪಾಟೀಲ್, ಅಂಬಿಕಾ ರೋಡ್
9. ಮಧುಸೂದನ್ ಪವ್ವಾರ್, ಪಾಂಡೇಶ್ವರ
10. ಗಿರಿರಾಜ್ ಧರೇಕರ್, ಅಶೋಕನಗರ
11. ಕೀರ್ತನ್ ಕುಮಾರ್ ಲಾಡ್, ಕಾರ್ಕಳ

ಸಾಲ ಮರುಪಾವತಿಗಾಗಿ ರೂ. 2000/– ಸಹಾಯಧನ ಅದೃಷ್ಟ ಚೀಟಿ ಬಿಡುಗಡೆ ಮಾಡಿ ಅದರ ಮೂಲಕ ರೂ 8,27,000/– ಸಂಗ್ರಹಿಸಿ ಸಂಘದ ಖಾತೆಗೆ ಜಮಾ ಮಾಡಲಾಯಿತು.

ಪ್ರಸ್ತುತ ಸಾಲಿನಲ್ಲಿ ಬಿ.ಜೆ ಚಂದ್ರಶೇಖರ್ ಪಾಟೀಲ್ ರೂ. 2 ಲಕ್ಷ, ಗಂಗಾಧರ ವಾಗ್ಮಾನ್ ರೂ. 1 ಲಕ್ಷ, ಮಹಾದೇವ ಪಾಟೀಲ್ ರೂ. 1 ಲಕ್ಷದಂತೆ ಒಟ್ಟು 4 ಲಕ್ಷ ಸಾಲ ಮರುಪಾವತಿ ಮಾಡಲಾಯಿತು.

**ರಕ್ತದಾನ:**

ತುರ್ತು ಸಂದರ್ಭಗಳಲ್ಲಿ ಸಮಾಜ ಬಾಂಧವರಿಗೆ ರಕ್ತದ ಅವಶ್ಯಕತೆ ಕಂಡುಬಂದಲ್ಲಿ ಸಂಘದ ರಕ್ತದಾನ ವೇದಿಕೆಯನ್ನು ಸಂಪರ್ಕಿಸಿದಲ್ಲಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

**ವೈದ್ಯಕೀಯ ಹಾಗೂ ಇತರ ಆರ್ಥಿಕ ನೆರವುಗಳ ವಿವರ**

| | | |
|---|---|---|
| 1. | ನಾಗವೇಣಿ | 6,000/– |
| 2. | ಮನೀಶ | 5,000/– |
| 3. | ಹರೀಶ್ ಪಾಟೀಲ್ | 5,000/– |
| 4. | ಜಯಂತ್ | 5,000/– |
| 5. | ರಾಘವೇಂದ್ರ | 5,000/– |
| 6. | ಹರಿಪ್ರಸಾದ್ ಪಿ. | 5,000/– |
| 7. | ಮಮತಾ ಜಿ. | 5,000/– |
| 8. | ಮಾದವ ರಾವ್ | 5,000/– |
| 9. | ದೀಕ್ಷಿತ್ | 5,000/– |
| 10. | ಸಂತೋಷ್ ರಾವ್ | 5,000/– |
| 11. | ಉಷಾ ವಿ.ಎಂ. | 5,000/– |
| 12. | ಮಮತಾ ಎಸ್. | 5,000/– |
| 13. | ಕಿರಣ್ ಎಸ್. | 5,000/– |
| 14. | ವೈಶಾಲಿ ಎ. | 5,000/– |
| 15. | ಮೇಘರಾಜ್ | 5,000/– |

**ಅಂತರ್ಜಾಲ:**

ಸಮಾಜ ಬಾಂಧವರ ಜತೆ ನಿರಂತರ ಸಂಪರ್ಕದಲ್ಲಿರಲು ಆರ್ಯ ಮರಾಠಸ್ ಫೇಸ್‌ಬುಕ್ ಖಾತೆಯನ್ನು (aryamarathas Facebook) ತೆರೆಯಲಾಗಿದೆ. ಅದೇ ರೀತಿ ನಮ್ಮ ಅಂತರ್ಜಾಲ ತಾಣ www.aryamaratha.com ಕೂಡಾ ಜಾಗತಿಕವಾಗಿ

ಲಭ್ಯವಿದ್ದು ಇದರಲ್ಲಿ ಸಮಾಜದ ಬಗ್ಗೆ ಸಂಕ್ಷಿಪ್ತ ವರದಿ, ಸಂಘದ ಪದಾಧಿಕಾರಿಗಳ ವಿವರ, ನೊಂದಾಯಿತ ಸದಸ್ಯರ ವಿವರ, ವಿಳಾಸ ಕೈಪಿಡಿ, ದೇವರಮನೆ ವಿವರಗಳು ಸಮಾಜ ಸಂಘ ನಿರ್ಮಾಣಕ್ಕೆ ಸಹಕರಿಸಿದ ದಾನಿಗಳ ವಿವರಗಳು ಲಭ್ಯವಿದ್ದು ಮುಖ್ಯವಾಗಿ ವಧು–ವರಾನ್ವೇಷಣೆ ಮಾಡುವವರಿಗಾಗಿ ವಧು–ವರರ ವಿವರಗಳನ್ನು ಒದಗಿಸಿಕೊಟ್ಟು ಇದರ ಉಪಯೋಗ ಪಡೆಯಬಹುದು. ಸಮುದಾಯ ಭವನದ ಪ್ರಚಾರಕ್ಕಾಗಿ Arya Maratha Bhavana ಎಂಬ Facebook Page ತೆರೆಯಲಾಗಿದೆ. ಸಂಪರ್ಕ ಸಂವಹನಕ್ಕಾಗಿ ಮಿಂಚಂಚೆ (email) aryamarathas@gmail.com ಸೌಲಭ್ಯ ಕೂಡಾ ಲಭ್ಯವಿದೆ. ಮುಂದಿನ ದಿನಗಳಲ್ಲಿ ನಮ್ಮ ಸಮಾಜ ಭವನದ ಬುಕಿಂಗ್ online ನಲ್ಲಿ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸುವ ಪ್ರಯತ್ನ ಜಾರಿಯಲ್ಲಿದೆ.

**ಸದಸ್ಯರು ಹಾಗೂ ಸಭೆಗಳು:**

ಪ್ರಸ್ತುತ ಸಂಘದಲ್ಲಿ 1421 ಅಜೀವ ಸದಸ್ಯರಿರುತ್ತಾರೆ. ವರದಿ ವರ್ಷದಲ್ಲಿ 12 ಮಾಸಿಕ ಕಾರ್ಯಕಾರಿ ಸಮಿತಿ ಸಭೆಗಳು ಹಾಗೂ 1 ವಿಶೇಷ ಕಾರ್ಯಕಾರಿ ಸಮಿತಿ ಸಭೆಗಳು ನಡೆದಿರುತ್ತದೆ. ಪ್ರಸ್ತುತ ಸದಸ್ಯತ್ವ ಶುಲ್ಕ ರೂ. 500/– ಆಗಿರುತ್ತದೆ.

**ವಲಯ ಸಮಾವೇಶಗಳು / ಕಾರ್ಯಕ್ರಮಗಳು :**

**ಕುಂಡಂಗೋಳಿ ವಲಯ :**

ವಲಯ ಸಮಾವೇಶವು ದಿನಾಂಕ 31–12–2023ರಂದು ಕುಂಡಂಗೋಳಿಯ ಹರಿಶ್ರೀ ಶಾಲೆಯಲ್ಲಿ ಜರಗಿತು. ಸಮಾವೇಶದಲ್ಲಿ ನೂತನ ಸಂಚಾಲಕರಾಗಿ ಅಶ್ವಿನ್ ಬಹುಮಾನ್‌ರವರನ್ನು ಆಯ್ಕೆ ಮಾಡಲಾಯಿತು. ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ ಜರಗಿತು.

**ಮಂಗಳೂರು ಉತ್ತರ ವಲಯ :**

ವಲಯ ಸಮಾವೇಶವು ದಿನಾಂಕ 18–09–2022ರಂದು ಕದ್ರಿ ಸುಮ ಸದನದಲ್ಲಿ ಜರಗಿತು. ಸಮಾವೇಶದಲ್ಲಿ ನೂತನ ಸಂಚಾಲಕರಾಗಿ ಶ್ರೀಮತಿ ಸವಿತಾ ವಿಶ್ವನಾಥ ಜಗತಾಪ್‌ರನ್ನು ಆಯ್ಕೆ ಮಾಡಲಾಯಿತು. ಪ್ರತಿಭಾ ಪುರಸ್ಕಾರ, ಸಾಧಕರ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.

**ಅಡೂರು ವಲಯ :**

ವಲಯ ಕ್ರೀಡಾಕೂಟ ದಿನಾಂಕ 05–11–2023ರಂದು ಅಡೂರು ಕೈಯ್ಯಣ್ಣಿಯಲ್ಲಿ ಜರಗಿತು. ಪ್ರತಿಭಾ ಪುರಸ್ಕಾರ, ಸಾಧಕರ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿತು.

**ಕಾಸರಗೋಡು ವಲಯ :**

ಸ್ನೇಹ ಮಿಲನ ಕಾರ್ಯಕ್ರಮವು ದಿನಾಂಕ 31–03–2024ರಂದು ಕಾಸರಗೋಡಿನ ನೀಲೇಶ್ವರ ಬೋಟ್ ಹೌಸ್‌ನಲ್ಲಿ ಜರಗಿತು.

**ಮಲ್ಲ ವಲಯ :**

ವಲಯ ಸಮಾವೇಶವು ದಿನಾಂಕ 28–01–2024ರಂದು ಪುಂಡೂರು ಎ.ಯು.ಪಿ. ಶಾಲೆಯಲ್ಲಿ ಜರಗಿತು. ಸಮಾವೇಶದಲ್ಲಿ ನೂತನ ವಲಯ ಸಂಚಾಲಕರಾಗಿ ನೂತನ ಪಾಟೀಲ್ ಅವರನ್ನು ಆಯ್ಕೆ ಮಾಡಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.

**ಪಶ್ಚಿಮ ವಲಯ :**

ವಲಯದ ನೇತೃತ್ವದಲ್ಲಿ ದಿನಾಂಕ 26–01–2024ರಂದು ಆರ್ಯ ಮರಾಠ ಭವನದಲ್ಲಿ ರಾಮತಾರಕ ಜಪ ಮಂತ್ರ ಜರಗಿತು.

**ಮಂಗಳೂರು ದಕ್ಷಿಣ ವಲಯ :**

ವಲಯದಲ್ಲಿ ಸ್ನೇಹ ಮಿಲನ ಕಾರ್ಯಕ್ರಮ ದಿನಾಂಕ 07–04–2024ರಂದು ಕದ್ರಿ ಉದ್ಯಾನವನದಲ್ಲಿ ಜರಗಿತು. ನೂತನ ಸಂಚಾಲಕರಾಗಿ ಗೋಪಾಲಕೃಷ್ಣ ಲಾಡ್ ಆಯ್ಕೆಗೊಂಡರು. ಮನೋರಂಜನಾ ಆಟಗಳು ಜರಗಿದವು.

**ಆರ್ಯ ಸಮುದಾಯ ಸಂಘ :**

ಕಾಸರಗೋಡು ವಿಭಾಗದಲ್ಲಿ ಸರಕಾರಿ ಮಟ್ಟದಲ್ಲಿ ಶಾಲಾ ದಾಖಲಾತಿ ಹಾಗೂ ಉದ್ಯೋಗ ಸೇರ್ಪಡೆ ಸಂದರ್ಭದಲ್ಲಿ ಜಾತಿ ಸಂಬಂಧಿತ ಗೊಂದಲಗಳಿರುವ ಹಿನ್ನೆಲೆಯಲ್ಲಿ ಸಮಾಜ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಒಪ್ಪಿಗೆ ಪಡೆದು ಆರ್ಯ ಸಮುದಾಯ ಸಂಘ (ರಿ.) ಕಾಸರಗೋಡು ಹೆಸರಿನಲ್ಲಿ ನೋಂದಣಿಯಾಗಿರುತ್ತದೆ. ಆ ಬಳಿಕ ಸದಸ್ಯತನ ಅಭಿಯಾನವನ್ನು ಆರಂಭಿಸಿ ದಿನಾಂಕ 17–05–2024ರಂದು ಮುಳ್ಳೇರಿಯಾ ಗಣೇಶ ಮಂದಿರದಲ್ಲಿ ಆರ್ಯ ಯಾನೆ ಮರಾಠ ಸಮಾಜ ಸಂಘದ ಅಧ್ಯಕ್ಷರಾದ ವಾಮನ ರಾವ್ ವಾರ್ಗ್ಮಾನ್ ಅಧ್ಯಕ್ಷತೆಯಲ್ಲಿ ಮಹಾಸಭೆ ನಡೆದು ಗಿರಿಧರ ರಾವ್ ಚೊಟ್ಟೆ ಕುಂಡಂಗೋಳಿಯವರು ಅಧ್ಯಕ್ಷರಾಗಿ, ರಾಜೇಶ್ ಎಡನೀರು ಕಾರ್ಯದರ್ಶಿಯಾಗಿರುವ ಪೂರ್ಣ ಪ್ರಮಾಣದ ಸಮಿತಿ ಅಸ್ತಿತ್ವಕ್ಕೆ ಬಂದಿರುತ್ತದೆ.

**ಸಂಘಕ್ಕೆ ದೇಣಿಗೆ / ಕೊಡುಗೆ ನೀಡಿದವರ ವಿವರ :**

1. ಗೋಪಾಲ ರಾವ್ ಭೋಂಸ್ಲೆ (ಅಂಬಾಭವಾನಿ ಎಜುಕೇಶನ್ ಟ್ರಸ್ಟ್‌ಗೆ) — ರೂ, 1,00,000/–
2. ಶ್ರೀಮತಿ ಯಮುನಾ ತಾರನಾಥ್ ಚೌಹಾಣ್ (ಅಂಬಾಭವಾನಿ ಎಜುಕೇಶನ್ ಟ್ರಸ್ಟ್‌ಗೆ) — ರೂ. 50,000/–
3. ಶ್ರೀ ಸಂಜೀವ ರಾವ್ ಸಿಂಧ್ಯ (ವಿದ್ಯಾರ್ಥಿವೇತನ ನಿಧಿ) — ರೂ. 1,11,111/–
4. ಶ್ರೀ ಬಿ.ಜೆ ಚಂದ್ರಶೇಖರ ಪಾಟೀಲ್ ಮತ್ತು ಮಕ್ಕಳು (ವಿದ್ಯಾರ್ಥಿವೇತನ ನಿಧಿ) — ರೂ. 1,00,000/–
5. ಶ್ರೀಮತಿ ಯಮುನಾ ತಾರನಾಥ್ ಚೌಹಾಣ್ (ವಿದ್ಯಾರ್ಥಿವೇತನ ನಿಧಿ) — ರೂ. 50,000/–
6. ಶ್ರೀಮತಿ ಕವಿತಾ ಮತ್ತು ಗಿರೀಶ್ ರಾವ್ ಬಹುಮಾನ್ (ಕಟ್ಟಡ ನಿಧಿ) — ರೂ. 50,000/–
7. ಶ್ರೀ ವಿಜಯ / ವಿನೋದ್ ಪಾಟೀಲ್ (ಕಟ್ಟಡ ನಿಧಿ) — ರೂ. 40,000/–
8. ಶ್ರೀಮತಿ ಜಯಂತಿ ಮತ್ತು ಮಹಾದೇವ ಪಾಟೀಲ್ (ಕಟ್ಟಡ ನಿಧಿ) — ರೂ. 25,015/–

**2023–24ನೇ ಸಾಲಿನಲ್ಲಿ ಜರಗಿದ ಕಾರ್ಯಕ್ರಮಗಳಿಗೆ ಉದಾರ ಧನಸಹಾಯ ನೀಡಿ ಸಹಕರಿಸಿದ ಮಹನೀಯರು**

**ವಾರ್ಷಿಕ ಮಹಾಸಭೆ**

| | |
|---|---|
| ಯುವವೇದಿಕೆ | 7,000/– |
| ಹರಿಕೇಶವ್ ಜಿ. ಜಾಧವ್ | 1,000/– |
| ವಾಮನ್ ರಾವ್ ವಾಗ್ಮಾನ್ | 1,000/– |
| ಪ್ರೇಮಲತಾ ವೈ. ರಾವ್ | 1,000/– |
| ಧನಂಜಯ ರಾವ್ ಬಹುಮಾನ್ | 1,000/– |
| ಮೋಹನ್ ರಾವ್ ಭೋಂಸ್ಲೆ | 1,000/– |
| ಶಿಶುಪಾಲ್ ರಾವ್ ಭೋಂಸ್ಲೆ | 1,000/– |
| ಉದಯ ಶಂಕರ್ ಜಾಧವ್ | 1,000/– |
| ನೀಳೋಜಿ ರಾವ್ ಭೋಂಸ್ಲೆ | 500/– |
| ಸೋಮಶೇಖರ್ ಜಗತಾಪ್ | 500/– |
| ರಾಜೇಶ್ ರಾವ್ ಪಾಟೀಲ್ | 500/– |
| ಶ್ರೀದರ್ ರಾವ್ ಪಾಟೀಲ್ | 500/– |
| ಶ್ರೀಧರ್ ರಾವ್ ಬಹುಮಾನ್ | 500/– |
| ಪೂರ್ಣಿಮ ಚಂದ್ರಮಾನ್ | 500/– |
| ವಿಶ್ವನಾಥ್ ರಾವ್ ಜಾಧವ್ | 500/– |

**ಪ್ರತಿಭಾ ಪುರಸ್ಕಾರ**

| | |
|---|---|
| ವಾಮನ ರಾವ್ ವಾಗ್ಮಾನ್ | 10,000/– |
| ಪುಷ್ಪಲತಾ ಸಂತೋಷ್ ಕಟ್ವಾಟ್ | 5,000/– |
| ಸಂಜೀವ ರಾವ್ ಸಿಂಧ್ಯ | 5,000/– |
| ಪ್ರೇಮಲತಾ ವೈ. ರಾವ್ | 5,000/– |
| ಗಿರೀಶ್ ರಾವ್ ಭೋಂಸ್ಲೆ | 5,000/– |
| ರಾಜ್ ದುಬೈ | 4,000/– |
| ಮೋಹನ್ ರಾವ್ ಭೋಂಸ್ಲೆ | 3,000/– |
| ಶಿಶುಪಾಲ್ ರಾವ್ ಭೋಂಸ್ಲೆ | 3,000/– |
| ಪುರುಷೋತ್ತಮ್ ರಾವ್ ಬಹುಮಾನ್ | 2,000/– |
| ಗಾಯತ್ರಿ ಚೌಹ್ಹಾಣ್ | 2,000/– |
| ಯತೀಂದ್ರ ಬಹುಮಾನ್ | 2,000/– |
| ಯತೀಶ್ ಕುಮಾರ್ ಪಾಟೀಲ್ | 2,000/– |
| ಶ್ರೀಧರ್ ರಾವ್ ಬಹುಮಾನ್ | 2,000/– |
| ನಾರಾಯಣ ರಾವ್ ಲಾಡ್ | 2,000/– |
| ಪ್ರಮೋದ್ ರಾವ್ ಬಹುಮಾನ್ | 2,000/– |
| ಪ್ರದೀಪ್ ಚಂದ್ರ ಜಾಧವ್ | 2,000/– |
| ಪೂರ್ಣಿಮ ಚಂದ್ರಮಾನ್ | 2,000/– |
| ಶ್ರೀ ದುರ್ಗಾ ಟ್ರೇಡರ್ಸ್ | 2,000/– |
| ರೋಹಿತ್ ರಾವ್ ಕೌಮಾರ್ | 1,000/– |
| ನೀಳೋಜಿ ರಾವ್ ಭೋಂಸ್ಲೆ | 1,000/– |
| ಸುರೇಶ್ ಲಾಡ್, ಜಲ್ಲಿಗುಡ್ಡೆ | 1,000/– |
| ರಾಜೇಶ್ ಎಡನೀರ್ | 1,000/– |

| | | | |
|---|---|---|---|
| ಕೀರ್ತನ್ ಕುಮಾರ್ ಲಾಡ್, ಕಾರ್ಕಳ | 1,000/– | ಶೈಲಜಾ ಜಯಂತಗ | 500/– |
| ಸವಿತಾ ವಿಶ್ವನಾಥ್ | 1,000/– | ಶ್ರೀಧರ ರಾವ್ ಪಾಟೀಲ್ | 500/– |
| ಧನಂಜಯ ರಾವ್ ಬಹುಮಾನ್ | 1,000/– | ಪ್ರೇಮ್‌ನಾಥ್‌ಜಿ ರಾವ್ ಜಾಧವ್ | 500/– |
| ಕುಸುಮಾಕರ್ ರಾವ್ ಚೌಹಾಣ್ | 1,000/– | ರಾಮಚಂದ್ರ ರಾವ್ | 500/– |
| ಉದಯ ಶಂಕರ್ ಜಾಧವ್ | 1,000/– | ಕೇಶವ ಜಗತಾಪ್ | 200/– |
| ನಾಗರಾಜ್ ಸಿಂಧ್ಯ | 1,000/– | **ವೈದ್ಯಕೀಯ ಸಹಾಯಧನ** | |
| ಗಂಗಾಧರ ವಾಗ್ಮಾನ್ | 500/– | ವಾಮನ ರಾವ್ ವಾಗ್ಮಾನ್ | 1,000/– |

**ಉಪಸಂಹಾರ:**

ವರದಿ ವರ್ಷದಲ್ಲಿ ಸಂಘದ ಕಾರ್ಯಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮತ್ತು ಸಮಾಜ ಬಾಂಧವರ ಸಂಪರ್ಕ ವೃದ್ಧಿಗಾಗಿ ನಮ್ಮಿಂದಾದ ಪ್ರಯತ್ನ ಮಾಡಲಾಗಿದೆ. ಸಂಘವು ಸಮಾಜ ಬಾಂಧವರ ಐಕ್ಯತೆ, ಪ್ರಾದೇಶಿಕ ಸಮಾನತೆ, ಸ್ನೇಹ ಸೌಹಾರ್ದತೆಗಾಗಿ ಸದಾ ಪ್ರಯತ್ನ ಮಾಡುತ್ತಲೇ ಇದೆ. 2023–24ನೇ ಸಾಲಿನ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಉತ್ತಮ ಸಲಹೆ ಸೂಚನೆಗಳನ್ನಿತ್ತು ಸಹಕರಿಸಿದ ನಮ್ಮ ಆತ್ಮೀಯರಿಗೆ, ಬಂಧುಗಳಿಗೆ, ಪದಾಧಿಕಾರಿಗಳಿಗೆ, ಸಂಘದ ಸದಸ್ಯರುಗಳಿಗೆ ಮತ್ತು ಮಹಿಳಾ ಸದಸ್ಯರುಗಳಿಗೆ, ಯುವ ವೇದಿಕೆ ಸದಸ್ಯರುಗಳಿಗೆ ಮತ್ತು ಪ್ರತ್ಯೇಕವಾಗಿ ವಲಯ ಸಂಚಾಲಕರಿಗೆ ನಮ್ಮ ನಮನಗಳು ಹಾಗೂ ಧನ್ಯವಾದಗಳು. ನಮ್ಮ ವಿವಿಧ ಕಾರ್ಯಕ್ರಮಗಳಿಗೆ ಪ್ರಾಯೋಜಕರಾಗಿ ಸಹಕರಿಸಿ ಪ್ರೋತ್ಸಾಹಿಸಿದ ಮಹನೀಯರುಗಳಿಗೆ ನಮ್ಮ ಆತ್ಮೀಯ ಧನ್ಯವಾದಗಳು. ಅಂತೆಯೇ ನಮ್ಮ ಸಮುದಾಯ ಭವನಕ್ಕೆ ಅನುದಾನ ನೀಡಿದ ಕರ್ನಾಟಕ ಸರಕಾರದ ವಿವಿಧ ಇಲಾಖೆಗಳಿಗೆ ಮತ್ತು ಮಂಗಳೂರು ಮಹಾನಗರ ಪಾಲಿಕೆ ಹಾಗೂ ಸಹಕರಿಸಿದ ಎಲ್ಲಾ ಜನ ಪ್ರತಿನಿಧಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಕೂಡಾ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತಾ ನಮ್ಮ ವರದಿಗೆ ಪೂರ್ಣವಿರಾಮವನ್ನು ಹಾಕುತ್ತಿದ್ದೇವೆ.

ಜೈ ಅಂಬಾಭವಾನಿ, ಜೈ ಶಿವಾಜಿ ಮಹಾರಾಜ್

ವಂದನೆಗಳು,

ಇತೀ

ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು
ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ.)
ಮಂಗಳೂರು – ಕಾಸರಗೋಡು

ಮಂಗಳೂರು
ದಿನಾಂಕ: 16–06–2024